

# ಮಗುವಿಗೆ ಬಂದಿರುವ ಜ್ವರವೇ ಕಾಯಿಲೆ ಅಲ್ಲ

**ಇದು ಜ್ವರದ ಕಾಲ. ಮುಂಗಾರಿನ ಕಣ್ಣಾಮುಚ್ಚಾಲೆ ಹಾಗೂ ತಂಪುಗಾಳಿಯ ಅಲೆಯ ಜುಗಲಬಂದಿ ಜ್ವರಕ್ಕೆ ಪೂರಕ. ಸೊಳ್ಳೆಗಳ ಸುಗ್ಗಿಕಾಲ ಜ್ವರವೂ ಹಿಗ್ಗುವ ಸಮಯ. ಈ ಜ್ವರ ಒಂದೆರಡು ಬಗೆಯದಲ್ಲ. ಡೆಂಗಿ, ಕಾಲರಾ, ಮಲೇರಿಯಾ, ಟೈಫಾಯಿಡ್, ಚಿಕುನ್‌ಗುನ್ಯ ಇವೆಲ್ಲ ಬಹುರೂಪಿ ಜ್ವರದ ಕೆಲವು ಹೆಸರುಗಳಷ್ಟೇ. ಕೆಲವು ಜ್ವರಗಳು ಒಮ್ಮೊಮ್ಮೆ ಹದ್ದುಮೀರಿ, ಸಾವುನೋವಿಗೆ ಕಾರಣವಾಗುವುದಿದೆ. ಡೆಂಗಿಯನ್ನೂ ಒಳಗೊಂಡಂತೆ ಜ್ವರಗಳ ಲೋಕವನ್ನು ಸರಳ ಭಾಷೆಯಲ್ಲಿ ಪರಿಚಯಿಸುವ, ಜ್ವರಪೀಡಿತರಿಗೆ ಹಾಗೂ ಅವರ ಪಾಲಕರಿಗೆ ಕಿವಿಮಾತುಗಳನ್ನು ಹೇಳುವ ತಜ್ಞ ವೈದ್ಯರ ಈ ಬರಹ ಸಂಗ್ರಹಿಸಿ ಇಟ್ಟುಕೊಳ್ಳಬೇಕಾದಂತಹದ್ದು. ಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡಿದ್ದರೂ ಎಲ್ಲ ವಯೋಮಾನದವರಿಗೂ ಉಪಯುಕ್ತವಾಗುವಂತಿದೆ.**

ಆತ ಒಬ್ಬ ಹೆಂಗರುಳಿನ ತಂದೆ. ಕೊರೊನಾ ಕಾಲಘಟ್ಟದಲ್ಲೊಮ್ಮೆ ಅವರ ಹತ್ತು ವರ್ಷದ ಮಗನಿಗೆ ಜ್ವರ ಕಾಣಿಸಿಕೊಂಡಿತು. ಕೊರೊನಾದಿಂದಲೇ ಜ್ವರ ಬಂದಿರುವುದು ಎಂದು ಬಲವಾಗಿ ನಂಬಿದ ಅವರು ಆತಂಕದಿಂದ ಒಂದಿಡೀ ರಾತ್ರಿ ನಿದ್ರೆ ಮಾಡಿರಲಿಲ್ಲ. ಮೊಬೈಲ್ ಮುಖಾಂತರವೇ ನಾನು ನೀಡಿದ ಸಲಹೆ ಸೂಚನೆಗಳನ್ನು ಪಾಲಿಸಿದ ಅವರು ಆ ಬಾಲಕ ಸಂಪೂರ್ಣವಾಗಿ ಜ್ವರಮುಕ್ತನಾದ ಮೇಲಷ್ಟೇ ಕಣ್ತುಂಬಾ ನಿದ್ರೆ ಮಾಡಿದ್ದುದು.

*

ಜ್ವರದ ಕಾರಣಕ್ಕಾಗಿ ನಾಲ್ಕು ವರ್ಷ ವಯಸ್ಸಿನ ಮಗುವನ್ನು ನನ್ನ ಬಳಿ ಕರೆತಂದಿದ್ದ ಪೋಷಕರು, 'ಸರ್, ಈ ಮಗುವಿಗೆ ಟೈಫಾಯಿಡ್ ಆಗಿದೆಯೆಂದು ನಮ್ಮ ಫ್ಯಾಮಿಲಿ ಡಾಕ್ಟರ್ ಚಿಕಿತ್ಸೆ ನೀಡಿದ್ದಾರೆ. ಚಿಕಿತ್ಸೆ ಪ್ರಾರಂಭಿಸಿ ಈಗಾಗಲೇ ಐದು ದಿನಗಳಾದವು. ಜ್ವರ ಬರುತ್ತಲೇ ಇದೆ. ನನ್ನ ಸ್ನೇಹಿತರೊಬ್ಬರು ನಿಮ್ಮ ಸಲಹೆ ಪಡೆಯುವಂತೆ ಹೇಳಿ ಕಳಿಸಿಕೊಟ್ಟರು' ಎಂದರು ಆ ಮಗುವಿನ ತಂದೆ. ಆ ಮಗುವನ್ನು ಕೂಲಂಕಷವಾಗಿ ಪರೀಕ್ಷಿಸಿದೆ. ಅವರು ನನಗೆ ನೀಡಿದ ರಿಪೋರ್ಟ್ ಪರಿಶೀಲಿಸಿದೆ. ಜ್ವರ ಪ್ರಾರಂಭವಾದ ಎರಡನೇ ದಿನವೇ ಮಾಡಿಸಲಾಗಿದ್ದ 'ವೈಡಲ್ ಟೆಸ್ಟ್' ಪಾಸಿಟಿವ್ ಎಂದು ತೋರಿಸುತ್ತಿತ್ತು. ವಾಸ್ತವ ಸಂಗತಿಯೇನೆಂದರೆ, ಜ್ವರ ಪ್ರಾರಂಭವಾದ ಒಂದು ವಾರದ ಮೇಲಷ್ಟೇ ಧನಾತ್ಮಕ (ಪಾಸಿಟಿವ್) ಫಲಿತಾಂಶ ನೀಡಬಲ್ಲದು ಆ ಟೆಸ್ಟ್ ಮತ್ತು ಅದರ ಟೈಟರ್ ದಿನೇ ದಿನೇ ಏರಿಕೆಯಾಗುತ್ತಿರಬೇಕು. ಈ ಮಗುವಿನಲ್ಲಾದಂತೆ ಎರಡನೇ ದಿನವೇ ಕಡಿಮೆ ಟೈಟರ್ ಇರುವ ಪಾಸಿಟಿವ್ ವೈಡಲ್ ರಿಪೋರ್ಟ್, ವೈರಾಣುಗಳ ಸೋಂಕನ್ನೂ ಒಳಗೊಂಡು ಯಾವುದೇ ಕಾಯಿಲೆಯಲ್ಲಾದರೂ ಬರಬಹುದು. ಇದನ್ನು ಮಿಥ್ಯ ಧನಾತ್ಮಕ (ಫಾಲ್ಸ್ ಪಾಸಿಟಿವ್) ಫಲಿತಾಂಶ ಎನ್ನಲಾಗುತ್ತದೆ. ಆ ಮಗುವಿಗೆ ಬಂದಿದ್ದುದು ಒಂದು ವೈರಾಣುವಿನ ಜ್ವರವಾಗಿತ್ತು ಮತ್ತು ಕೇವಲ ಜ್ವರ ನಿವಾರಕ ಔಷಧದ ಬಳಕೆಯಿಂದ ಒಂದೆರಡು ದಿನಗಳಲ್ಲಿ ಅದು ತಹಬದಿಗೆ ಬರುವಂತಹುದಾಗಿತ್ತು.

*

ಆಕೆ ಒಬ್ಬ ಆಯುರ್ವೇದ ತಜ್ಞೆ. ತನ್ನ ಐದು ವರ್ಷದ ಮಗುವಿಗೆ ಮೂರು ದಿನಗಳಿಂದ ಕೆಮ್ಮಿನೊಂದಿಗೆ ಜ್ವರ ಬರುತ್ತಿದೆ ಎಂದು ಕರೆತಂದಿದ್ದರು. ತನ್ನ ಕೈಯಲ್ಲಿದ್ದ ಔಷಧದ ಬಾಟಲಿಯನ್ನು ತೋರಿಸಿ 'ಜ್ವರ ಪ್ರಾರಂಭವಾದ ದಿನದಿಂದಲೇ ಈ ಔಷಧವನ್ನು ಹಾಕುತ್ತಿದ್ದೇನೆ. ಆದರೂ ಜ್ವರ ಕಡಿಮೆಯಾಗಿಲ್ಲ' ಎಂದರು. ಅದು ಆ್ಯಂಟಿಬಯೊಟಿಕ್ ಆಗಿತ್ತು. ನ್ಯುಮೋನಿಯಾ, ಮಧ್ಯಕಿವಿಯ ಉರಿಯೂತ ಮುಂತಾದ ಗಂಭೀರ ಸ್ವರೂಪದ ಕಾಯಿಲೆಗಳಲ್ಲಷ್ಟೇ ಬಳಸುವಂತಹದ್ದು. 'ಈ ಔಷಧವನ್ನು ಏಕೆ ನೀಡಿದಿರಿ?' ಎಂದು ನಾನಾಕೆಯನ್ನು ಕೇಳಿದೆ. 'ನಾನೊಬ್ಬ ಆಯುರ್ವೇದ ತಜ್ಞೆ. ಜ್ವರ ಬಂದಾಗಲೆಲ್ಲಾ ನಾನು ಮಗುವಿಗೆ ಇದನ್ನೇ ಬಳಸುವುದು' ಎಂದರು. ನಾನು ಆ ಔಷಧದ ಸಾಧಕ ಬಾಧಕಗಳನ್ನೆಲ್ಲಾ ವಿವರಿಸಿ, ಅದು ವೈರಾಣುವಿನ ಕಾಯಿಲೆಯಾಗಿದ್ದರಿಂದ ಕೇವಲ ಜ್ವರ ನಿವಾರಕ ಮತ್ತು ಕೆಮ್ಮು ನಿವಾರಕ ಔಷಧ ಶಿಫಾರಸ್ಸು ಮಾಡಿ ಕಳಿಸಿದೆ. ಒಂದೆರಡು ದಿನಗಳಲ್ಲಿ ಜ್ವರ ನಿಯಂತ್ರಣಕ್ಕೆ ಬಂದಿತು.

*

ಆಕೆಯೊಬ್ಬ ಸಾಫ್ಟ್‌ವೇರ್ ಎಂಜಿನಿಯರ್. ತನ್ನ ಆರು ತಿಂಗಳ ಮಗುವಿಗೆ ಮಧ್ಯರಾತ್ರಿ ಜ್ವರ ಬಂದಿತ್ತೆಂದು ಊಬರ್ ಬುಕ್ ಮಾಡಿಕೊಂಡು ತನ್ನ ಪತಿಯೊಂದಿಗೆ ಕಾರ್ಪೊರೇಟ್ ಆಸ್ಪತ್ರೆಯೊಂದಕ್ಕೆ ಹೋದರು. ಅಲ್ಲಿದ್ದ ಡ್ಯೂಟಿ ಡಾಕ್ಟರ್ ಪರೀಕ್ಷಿಸಿ, ಪ್ಯಾರಸಿಟಮಾಲ್ ಔಷಧ ನೀಡಿ, ಮುಂಜಾನೆ ಬಂದು ತಜ್ಞ ವೈದ್ಯರ ಸಲಹೆ ಪಡೆಯುವಂತೆ ಹೇಳಿ ಕಳಿಸಿದರು. ಮರುದಿನ ತಮ್ಮ ಕೆಲಸಕ್ಕೆ ರಜೆ ಹಾಕಿದ ಪತಿ–ಪತ್ನಿ ಇಬ್ಬರೂ ಆ ಆಸ್ಪತ್ರೆಯ ಮಕ್ಕಳ ವೈದ್ಯರನ್ನು ಭೇಟಿಯಾದರು. ಪರೀಕ್ಷಿಸಿದ ಆ ವೈದ್ಯರು ಇನ್ನೊಂದೆರಡು ದಿನ ಅದೇ ಔಷಧ ಹಾಕುವಂತೆ ಹೇಳಿ ಕಳಿಸಿದರು. ಮರುದಿನ ಆ ಮಗುವಿಗೆ ಮೂಗು ಸೋರುವಿಕೆ ಪ್ರಾರಂಭವಾಯಿತು. ಅದೊಂದು ವೈರಾಣುವಿನ ಸೋಂಕಾಗಿದ್ದುದರಿಂದ ಮೂರ್ನಾಲ್ಕು ದಿನಗಳಲ್ಲಿ ಜ್ವರ ನಿಯಂತ್ರಣಕ್ಕೆ ಬಂದಿತು. ಅಷ್ಟರಲ್ಲಿ ಆಕೆಯ ಸಮಯ, ಹಣ, ಶಕ್ತಿ ಎಲ್ಲವೂ ವ್ಯಯ ಆಗಿದ್ದವು.

*

ಎಂಜಿನಿಯರಿಂಗ್ ಓದುತ್ತಿರುವ ತಮ್ಮ ಮಗನನ್ನು ನನ್ನ ಬಳಿ ಕರೆತಂದಿದ್ದ ಪರಿಚಿತರೊಬ್ಬರು ಒಳಬರುತ್ತಿದ್ದಂತೆಯೇ, 'ಇವನಿಗೆ ನಿನ್ನೆಯಿಂದ ಜ್ವರ